


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

# ಮೈಸೂರಿನಲ್ಲಿ ಲೈಟ್ ಹೌಸ್ ಇನಿಶಿಯೇಟಿವ್ ಫೇಸ್-2 ಜಾರಿ;

## ಸ್ವಚ್ಛ ಗ್ರಾಮಗಳ ನಿರ್ಮಾಣಕ್ಕೆ ಪುಷ್ಟಿ

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಗ್ರಾಮಗಳಲ್ಲಿ ನೈರ್ಮಲ್ಯ ಸಾಧಿಸಲು ಪಣತೊಟ್ಟಿದೆ. ಬಯಲು ಬಹಿರ್ದೆಸೆ ಮುಕ್ತ ಸ್ಥಿತಿ ಕಾಯ್ದುಕೊಳ್ಳಲು, ಘನ, ದ್ರವ ಹಾಗೂ ಮಲತ್ಯಾಜ್ಯದ ವ್ಯವಸ್ಥಿತ ವಿಲೇವಾರಿ, ನಿರ್ವಹಣೆ ಹಾಗೂ ಸಂಸ್ಕರಣೆಯಂತಹ ಸ್ವಚ್ಛತಾ ಪ್ರಯತ್ನಗಳು ನಡೆಯುತ್ತಿವೆ. ಮುಂದುವರೆದು ಸ್ವಚ್ಛ ಗ್ರಾಮ ನಿರ್ಮಾಣ ಮಾಡುವ ಉದ್ದೇಶದಿಂದ ಮೈಸೂರಿನ ಹುಣಸೂರು ತಾಲ್ಲೂಕಿನಲ್ಲಿ ಲೈಟ್ ಹೌಸ್ ಇನಿಶಿಯೇಟಿವ್ ಫೇಸ್- 2 ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ಇದು ಸ್ವಚ್ಛತಾ ಸಾಧನೆಗೆ ಮತ್ತಷ್ಟು ಪುಷ್ಟಿ ನೀಡುವ ಹಾಗಿದೆ.



# ಏನಿದು ಲೈಟ್‌ಹೌಸ್ ಇನಿಶಿಯೇಟಿವ್?

ಲೈಟ್‌ಹೌಸ್ ಇನಿಶಿಯೇಟಿವ್ (LHI) ಎನ್ನುವುದು ಕೇಂದ್ರ ಜಲಶಕ್ತಿ ಸಚಿವಾಲಯದ ಒಂದು ಕಾರ್ಯಕ್ರಮ. ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸುವ ಗುರಿಯೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.. ಸುಸ್ಥಿರ ಮತ್ತು ಪರಿಣಾಮಕಾರಿಯಾದ ಶುಚಿತ್ವ, ಓಡಿಎಫ್ ಸ್ಥಿತಿ ಸಾಧನೆ, ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನದೊಂದಿಗೆ ಗ್ರಾಮದಲ್ಲಿ ನೈರ್ಮಲ್ಯತೆ ಕಾಯ್ದುಕೊಂಡು ಸ್ವಚ್ಛ ಗ್ರಾಮ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಈ ಲೈಟ್ ಹೌಸ್ ಇನಿಶಿಯೇಟಿವ್ ಅನ್ನು ಜಾರಿಗೆ ತರಲಾಗಿದೆ.

ಭಾರತ ಸರ್ಕಾರದ ಜಲಶಕ್ತಿ ಸಚಿವಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (DDWS), ಭಾರತ ನೈರ್ಮಲ್ಯ ಒಕ್ಕೂಟ (ISC) ಸಹಯೋಗದೊಂದಿಗೆ, ಜುಲೈ 29, 2022ರಂದು ನವದೆಹಲಿಯಲ್ಲಿ "ಲೈಟ್‌ಹೌಸ್ ಇನಿಶಿಯೇಟಿವ್" ಎಂಬ ಹೆಸರಿನಲ್ಲಿ ಒಂದು ವಿಶಿಷ್ಟ ಸಾರ್ವಜನಿಕ, ಖಾಸಗಿ ಪಾಲುದಾರಿಕೆಯ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. 'ಆಜಾದಿ ಕಾ ಅಮೃತ ಮಹೋತ್ಸವ'ದ ಭಾಗವಾಗಿ ಲೈಟ್‌ಹೌಸ್ ಇನಿಶಿಯೇಟಿವ್ ಫೇಸ್-1 ಉಪಕ್ರಮವನ್ನು ಮೊದಲಿಗೆ ದೇಶದ 15 ರಾಜ್ಯಗಳ 75 ಗ್ರಾ.ಪಂ.ಗಳಲ್ಲಿ ಪೈಲೆಟ್ ಯೋಜನೆಯಾಗಿ ಓಡಿಎಫ್'ನ ಮಾದರಿ ಬ್ಲಾಕ್‌ಗಳನ್ನು ರಚಿಸುವ ಆಲೋಚನೆಯೊಂದಿಗೆ ಪ್ರಾರಂಭಿಸಲಾಯಿತು. ಈ ಮೂಲಕ ಎಲ್ಲಾ ಗ್ರಾಮಗಳಿಗೂ ಓಡಿಎಫ್ ಪ್ಲಸ್ ಸ್ಥಾನಮಾನವನ್ನು ಸಾಧಿಸಲು ಮಾರ್ಗದರ್ಶನ ಮತ್ತು ಸ್ಫೂರ್ತಿಯನ್ನು ಒದಗಿಸಲು ಕಲಿಕಾ ಕೇಂದ್ರದ ರೀತಿಯಲ್ಲಿ ಮಾದರಿ ಬ್ಲಾಕ್ ಗಳನ್ನು ರಚಿಸಲು ಉದ್ದೇಶಿಸಲಾಗಿತ್ತು.

# ಸಾರ್ವಜನಿಕ-ಖಾಸಗಿ ಸಹಭಾಗಿತ್ವ

ಸ್ವಚ್ಛ ಗ್ರಾಮ ನಿರ್ಮಾಣದ ಉದ್ದೇಶದೊಂದಿಗೆ ಪ್ರಾರಂಭಿಸಲಾದ "ಲೈಟ್‌ಹೌಸ್ ಇನಿಶಿಯೇಟಿವ್" ಭಾಗವಾಗಲು ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳನ್ನು ಆಹ್ವಾನಿಸಲಾಯಿತು. ನೈರ್ಮಲ್ಯ ಕ್ಷೇತ್ರದಲ್ಲಿ ಪರಿವರ್ತನಾತ್ಮಕ ಬದಲಾವಣೆಯನ್ನು ತರಲು ಕಾರ್ಪೊರೇಟ್ ವಲಯದ ಪಾಲುದಾರರ ಸಹಕಾರ ಪಡೆಯಲು ಉದ್ದೇಶಿಸಲಾಯಿತು. ಈ ಹಿನ್ನೆಲೆ ವಾಟರ್ ಏಡ್, ಸೆಂಟರ್ ಫಾರ್ ಎನ್ವಿರಾನ್ಮೆಂಟ್ ಪ್ಲಾನಿಂಗ್ & ಟೆಕ್ನಾಲಜಿ (CEPT), ಅಗಾ ಖಾನ್ ಫೌಂಡೇಶನ್, ಫಿನಿಶ್ ಸೊಸೈಟಿ ಮೊದಲಾದ ಸಂಸ್ಥೆಗಳು ಲೈಟ್‌ಹೌಸ್ ಇನಿಶಿಯೇಟಿವ್ ಫೇಸ್-1ರ ಭಾಗವಾಗಿ ಕಾರ್ಯನಿರ್ವಹಿಸಿ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಧ್ಯೆಯೋದ್ದೇಶಗಳನ್ನು ಪೂರೈಸುವಲ್ಲಿ, ಜನಜಾಗೃತಿ ಮೂಡಿಸುವಲ್ಲಿ ಮಹತ್ತರ ಪಾತ್ರ ವಹಿಸಿದವು.



# ಗ್ರಾಮೀಣ ಪರಿಸರ ಸಂರಕ್ಷಣೆಗೆ ಮೈಸೂರಿನಲ್ಲಿ ಲೈಟ್ ಹೌಸ್ ಇನಿಶೀಯೇಟಿವ್ ಫೇಸ್-2 ಜಾರಿ

ಎಲ್ಎಚ್ಐ ಭಾಗ 1ರಲ್ಲಿ ದೇಶದ 15 ರಾಜ್ಯಗಳಲ್ಲಿ 75 ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಯೋಜನೆ ಜಾರಿಗೊಳಿಸಿ ಯಶಸ್ವಿ ಫಲಿತಾಂಶ ಬಂದ ಬಳಿಕ ಈ ಯೋಜನೆಯನ್ನು ಭಾಗ 2 ರಲ್ಲಿ ವಿಸ್ತರಿಸಿ ಗ್ರಾಮಗಳ ಆಯ್ಕೆ ನಡೆದಿದೆ. ದೇಶದ 30 ತಾಲ್ಲೂಕುಗಳಲ್ಲಿ ಲೈಟ್‌ಹೌಸ್ ಇನಿಶಿಯೇಟಿವ್ ಫೇಸ್ 2 ಅನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಅದರಂತೆ ಮೈಸೂರು ಜಿಲ್ಲೆಯ ನಂಜನಗೂಡು ಹಾಗೂ ಹುಣಸೂರು ತಾಲ್ಲೂಕು ಆಯ್ಕೆಯಾಗಿದ್ದು, ಇತ್ತೀಚೆಗೆ ಹುಣಸೂರು ನಗರದಲ್ಲಿ ಮೈಸೂರು ಜಿಲ್ಲಾ ಪಂಚಾಯಿತಿ ಹಾಗೂ ಸರ್ಕಾರೇತರ ಸಂಸ್ಥೆಗಳಾದ ಐಟಿಸಿ, ಎಂಎಸ್‌ಕೆ, ಔಟ್‌ರೀಚ್ ಮತ್ತು ಮೈಕ್ಯಾಪ್ಸ್ ಸಹಯೋಗದಲ್ಲಿ  ಲೈಟ್ ಹೌಸ್ ಇನಿಶಿಯೇಟಿವ್ ಫೇಸ್- 2 ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮೈಸೂರಿನಲ್ಲಿ ಸುಸ್ಥಿರ ನೈರ್ಮಲ್ಯದೊಂದಿಗೆ ನೈರ್ಮಲ್ಯಕ್ಕೆ ಪೂರಕವಾದ ಘನ, ದ್ರವ ಮತ್ತು ಮಲತ್ಯಾಜ್ಯದ ಸಮರ್ಪಕ ನಿರ್ವಹಣೆಯ ಮೂಲಕ ಮಾದರಿ ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

## ಯೋಜನೆ ಯಶಸ್ವಿಗೆ ಐಟಿಸಿ ಬೆಂಬಲ




ಲೈಟ್‌ಹೌಸ್ ಇನಿಶಿಯೇಟಿವ್ ಫೇಸ್-2 ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸ್ವಯಂ ಸೇವಾ ಸಂಘಗಳೊಂದಿಗೆ ಐಟಿಸಿ ಕಂಪನಿ ಕೈ ಜೋಡಿಸಿ ಗ್ರಾಮಗಳ ನೈರ್ಮಲ್ಯತೆ ವೃದ್ಧಿಗೆ ಮುಂದಾಗಿದೆ. ರಾಜ್ಯದಲ್ಲಿ ಐಟಿಸಿ ಈ ಹಿಂದಿನಂದಲೂ ಸುಸ್ಥಿರ ನೈರ್ಮಲ್ಯ ಸ್ಥಾಪನೆಗೆ ಸರ್ಕಾರದೊಂದಿಗೆ ಸಹಭಾಗಿತ್ವ ನೀಡಿದೆ. ಮೈಸೂರು ಜಿಲ್ಲಾ ಪಂಚಾಯಿತಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಳೆದ ಆರು ವರ್ಷಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಮಾಡಲು ಐ.ಇ.ಸಿ ಚಟುವಟಿಕೆಗಳ ಮೂಲಕ ಜಾಗೃತಿ ಮೂಡಿಸುತ್ತಿದೆ. ಇದೀಗ ಲೈಟ್ ಹೌಸ್ ಇನಿಶಿಯೇಟಿವ್ ಪೇಸ್-2 ನ ಭಾಗವಾಗಿರುವ ಐಟಿಸಿ ಮಾರ್ಚ್ 2026ಕ್ಕೆ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸಲು ಉದ್ದೇಶಿಸಿದೆ.

ಒಟ್ಟಿನಲ್ಲಿ ಲೈಟ್‌ಹೌಸ್ ಇನಿಶಿಯೇಟಿವ್ ಫೇಸ್-2 ಕಾರ್ಯಕ್ರಮವು ಮೈಸೂರು ಜಿಲ್ಲೆಯಲ್ಲಿ ನೈರ್ಮಲ್ಯ ಸಾಧನೆಯ ಜೊತೆಗೆ ಮಾದರಿ ಗ್ರಾಮಗಳ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸಲಿದ್ದು, ಸ್ವಚ್ಛ ಭಾರತ್ ಮಿಷನ್ ಧ್ಯೇಯೋದ್ದೇಶಗಳನ್ನು ತಲುಪುವ ಹಾದಿಗೆ ಬೆಳಕಾಗಲಿದೆ.